ಓ.ಎಸ್. ನಂಃ 453/2023
ಪಿ.ಡಬ್ಲ್ಯೂ-2 (ಕಾಡಪ್ಪ)

ದಿನಾಂಕ: 02-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ವಾಯ್.ಎಲ್.ಡಿ. ಪ್ರತಿವಾದಿಯರ ಪರ ವಕೀಲರಿಂದಃ**

ನಾನು ಪಿ.ಯು.ಸಿ ವರೆಗು ಓದಿದ್ದೇನೆ. ನಾನು ಹಾಗೂ ವಾದಿ ಸ್ನೇಹಿತರು ಎಂದರೆ ಸರಿಯಲ್ಲ. ವಾದಿ ಹಾಗೂ ನಾನು ಸೇರಿ ನಮ್ಮ ಓಣಿಯಲ್ಲಿ ಹಿರಿತನ ಮಾಡುತ್ತೇವೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ.

2. ವಾದಿ ಮತ್ತು ಪ್ರತಿವಾದಿಯರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 30/12/2022ಕ್ಕಿಂತ ಪೂರ್ವದಲ್ಲಿ ಪ್ರತಿವಾದಿಯ ಗಂಡ ನನಗೆ ಭೇಟಿಯಾಗಿರುತ್ತಾರೆ. ನನ್ನ ಸಮಕ್ಷಮ ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಪ್ರತಿವಾದಿಗೆ ವಾದಿ ರೂ.4,50,000/- ದುಡ್ಡು ಕೊಟ್ಟಿರುತ್ತಾರೆ. ಖರೀದಿ ಮಾತುಕತೆ ವ್ಯವಹಾರದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಮಾತುಕತೆ ವ್ಯವಹಾರಕ್ಕೆ ಅಕ್ಟೋಬರ್ 2022ರಲ್ಲಿ ಪ್ರತಿವಾದಿಯ ಗಂಡನ ನನ್ನನ್ನು ವಾದಿಯ ಮನೆಗೆ ಕರೆದುಕೊಂಡು ಹೋಗಿದ್ದರು. ವಾದಿ ನನಗೆ ವ್ಯವಹಾರಕ್ಕೆ ಕರೆದಿರಲಿಲ್ಲ. ಆಗ ನಾನು ವಿಠ್ಠಲ ಸಣ್ಣಕ್ಕಿ, ಬಾಳೇಶ ಸಂತುಗೋಳ, ಆನಂದ ಹಾಗೂ ಪ್ರತಿವಾದಿಯ ಗಂಡ ಇವರುಗಳು ಹಾಜರ ಇದ್ದರು. ಅಕ್ಟೋಬರ್ 2022ರಲ್ಲಿ ವಾದಿಯ ಮನೆಯಲ್ಲಿ ಮಾತುಕತೆ ಆಗಿದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ

ಪತ್ರದಲ್ಲಿ ಬರೆಯಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ವಾದಿ ಪ್ರತಿವಾದಿಗೆ ರೂ.4,50,000/- ಕೊಟ್ಟಿದ್ದಾರೆ ಎಂದು ಬರೆಯಿಸಿಲ್ಲ.

3. ಖರೀದಿ ಕರಾರ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಪ್ರತಿವಾದಿ ದಸ್ತು ಬರಹಗಾರರ ಕಚೇರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು, ವಾದಿ ಒತ್ತಾಯಪೂರ್ವಕವಾಗಿ ಪ್ರತಿವಾದಿಯನ್ನು ಉಪ-ನೋಂದಣಿ ಅಧಿಕಾರಿಗಳ ಕಚೇರಿಗೆ ಕರೆದುಕೊಂಡು ಬಂದು ದಾಖಲೆ ನೋಂದ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಖರೀದಿ ಕರಾರ ಪತ್ರಕ್ಕೆ ಪ್ರತಿವಾದಿ ಸಹಿ ಮಾಡಲು ಒಪ್ಪದೇ ಇದ್ದರೂ ಸಹ ಒತ್ತಾಯಪೂರ್ವಕವಾಗಿ ಪ್ರತಿವಾದಿಯ ಸಹಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯ ಗಂಡನ ಸಹಿಯನ್ನು ಸಹ ಒತ್ತಾಯಪೂರ್ವಕವಾಗಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ.

4. ಖರೀದಿ ಕರಾರ ಪತ್ರ ಬರೆಯಲು ಬೆಳಿಗ್ಗೆ 10.00 ಗಂಟೆಗೆ ಹೋಗಿದ್ದೆವು. ಖರೀದಿ ಕರಾರ ಪತ್ರ ಮಧ್ಯಾಹ್ನ 01.00 ಗಂಟೆಗೆ ನೋಂದ ಆಗಿರುತ್ತದೆ. ವಾದಿ ಪ್ರತಿವಾದಿಗೆ ಯಾವುದೇ ದುಡ್ಡು ಕೊಡದೇ ಇದ್ದರೂ ಸಹ ವಾದಿ ನನ್ನ ಸ್ನೇಹಿತನಾಗಿದ್ದರಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಹಾಗೂ ವಾದಿಯ ಚಿಕ್ಕಪ್ಪ ಸಹ ಪುರಸಭೆ ಸದಸ್ಯರಿದ್ದೇವು ಎಂದರೆ ಸರಿ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಪ್ರತಿವಾದಿ ಹಾಗೂ ಅವರ ಗಂಡ ವಾದಿ ಕಡೆಯಿಂದ ಒಮ್ಮೆ ರೂ.2,00,000/- ಹಾಗೂ ರೂ.50,000/- ಎರಡು ಬಾರಿ ಪಡೆದಿದ್ದಾರೆ. ಸದರಿ ಮೊತ್ತವನ್ನು ಖರೀದಿ ವ್ಯವಹಾರ ಆಗುವುದಕ್ಕಿಂತ 3-4 ತಿಂಗಳು ಮೊದಲು ಪಡೆದಿದ್ದಾರೆ. ನಾನು ಹೇಳಿದಂತೆ ಪ್ರತಿವಾದಿಯರು ಯಾವತ್ತೂ ವಾದಿಯಿಂದ ದುಡ್ಡು ಪಡೆದಿಲ್ಲ ಎಂದರೆ ಸರಿಯಲ್ಲ.

7. ಖರೀದಿ ಕರಾರ ಪತ್ರ ಬರೆದ ನಂತರ 4-5 ಬಾರಿ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಡಲು ಕೇಳಿದ್ದೆವು. ಖರೀದಿ ಕರಾರ ಪತ್ರದ 05 ತಿಂಗಳ ಅವಧಿ ಮುಗಿದ 2-3 ದಿನದಲ್ಲಿ ಪ್ರತಿವಾದಿಯರ ಬಳಿ ಖರೀದಿ ಪತ್ರ ಬರೆದುಕೊಡಿ ಎಂದು ಕೇಳಲು ಹೋಗಿದ್ದೆವು. ವಾದಿ ಮತ್ತು ಪ್ರತಿವಾದಿ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಏನೂ ಮಾಹಿತಿ ಇರದೇ ಇದ್ದರೂ ಸಹ ಪ್ರತಿವಾದಿಯ ಮನೆಗೆ ಹೋಗಿ ಖರೀದಿ ಕರಾರ ಪತ್ರದ ಆಧಾರದ ಮೇಲೆ ಖರೀದಿ ಪತ್ರ ಬರೆದುಕೊಡಿ ಎಂದು ಕೇಳಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ವಾದಿಗೆ ನಾನು ನನ್ನ ಸಾಕ್ಷಿಯಲ್ಲಿ ಹೇಳಿದಷ್ಟು ದುಡ್ಡು ಕೊಡಲು ಶಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿ ಲಪ್ಟಾಯಿಸುವ

ಉದ್ದೇಶದಿಂದ ನಾನು, ವಾದಿ ಮತ್ತು ಇತರೇ ಸಾಕ್ಷಿದಾರರು ಸೇರಿಕೊಂಡು ಸುಳ್ಳು ಕರಾರು ಪತ್ರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯಗಳೆಲ್ಲವೂ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ